## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ನೂತನ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರು ವಜಾಗೊಂಡ ಸಂದರ್ಭದಲ್ಲಿ ನೌಕರರ ಪ್ರಾನ್ ಖಾತೆಯಲ್ಲಿರುವ ಮೊತ್ತವನ್ನು ಇತ್ಯರ್ಥಪಡಿಸುವ ಕುರಿತು.

**ಓದಲಾಗಿದೆ**: 1] ಆದೇಶ ಸಂಖ್ಯೆ:ಆಇ[ಎಸ್ ಪಿಎಲ್] 04 ಪಿಇಟಿ 2005 ದಿ:31-3-2006
2] ಸುತ್ತೋಲೆ ಸಂಖ್ಯೆ:ಆಇ[ವಿ] 94 ಪಿಇಎನ್ 2016 ದಿ:27-5-2019
3] ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಇವರ ಪತ್ರ ದಿ:20-6-2019

* * * *

**ಪ್ರಸ್ತಾವನೆ:**

ಮೇಲೆ ಕ್ರಮಸಂಖ್ಯೆ[1]ರಲ್ಲಿ ಓದಲಾದ ಆದೇಶದಲ್ಲಿ ದಿನಾಂಕ:1-4-2006ರಂದು ಮತ್ತು ತದನಂತರ ಸೇವೆಗೆ ಸೇರುವ ಎಲ್ಲಾ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ[2]ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೂತನ ಪಿಂಚಣಿ ಯೋಜನೆಯಡಿಯ ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ ಪ್ರಾನ್[PRAN] ಖಾತೆಯಲ್ಲಿರುವ ನೌಕರರ ವಂತಿಗೆ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಮಾತ್ರ ನೌಕರರಿಗೆ ಅಥವಾ ವಜಾಗೊಂಡ ನೌಕರರು ಮೃತಪಟ್ಟಿದ್ದಲ್ಲಿ ಅವರ ನಾಮನಿರ್ದೇಶಿತರಿಗೆ/ ಕುಟುಂಬದವರಿಗೆ ಇತ್ಯರ್ಥಪಡಿಸತಕ್ಕದ್ದು ಹಾಗೂ ಪ್ರಾನ್[PRAN] ಖಾತೆಯಲ್ಲಿರುವ ಸರ್ಕಾರದ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡತಕ್ಕದ್ದೆಂದು ತಿಳಿಸಲಾಗಿತ್ತು.

ಮೇಲೆ ಕ್ರಮಸಂಖ್ಯೆ[3]ರಲ್ಲಿ ಓದಲಾದ ಖಜಾನೆ ನಿರ್ದೇಶಕರ ಪತ್ರದಲ್ಲಿ ಸೇವೆಯಿಂದ ವಜಾಆದ NPS ನೌಕರರ ಪ್ರಾನ್ ಖಾತೆಯಲ್ಲಿ ಶೇಖರಣೆಗೊಂಡಿರುವ ಮೊತ್ತದಲ್ಲಿ ನೌಕರರ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ನೌಕರರಿಗೆ ಅಥವಾ ವಜಾಗೊಂಡಿರುವ ನೌಕರರು ಮೃತಪಟ್ಟಿದ್ದಲ್ಲಿ ಸದರಿಯವರ ನಾಮನಿರ್ದೇಶಿತರಿಗೆ ಹಾಗೂ ಸರ್ಕಾರದ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆಮಾಡುವಂತೆ ದಿನಾಂಕ:27-5-2019ರ ಸುತ್ತೋಲೆಯಲ್ಲಿ ತಿಳಿಸಿದ್ದು, ಆದರೆ ಯಾವ ಲೆಕ್ಕಶೀರ್ಷಿಕೆಗಳಿಗೆ ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಜಮೆ ಮಾಡಬೇಕೆಂಬ ಬಗ್ಗೆ ಸುತ್ತೋಲೆಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲವೆಂದು ತಿಳಿಸಲಾಗಿದೆ.

ಮುಂದುವರೆದು, ಪ್ರಾನ್ ಖಾತೆಯಲ್ಲಿ ಶೇಖರಣೆಗೊಂಡಿರುವ ಮೊತ್ತವನ್ನು ಸಿಆರ್ಎ ರವರು ನೌಕರರ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಸಂಬಂಧಪಟ್ಟ ನೌಕರರ ಬ್ಯಾಂಕ್ ಖಾತೆಗೆ ಹಾಗೂ ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಈಗಾಗಲೇ ನಾನ್ ಎನ್‌ಪಿಎಸ್ ನೌಕರರ ಇ.ಆರ್.ಎಂ. ಪ್ರಕ್ರಿಯೆಗಾಗಿ SBI ಶಿವಾಜಿನಗರ ಶಾಖೆಯಲ್ಲಿ ಖಜಾನೆ ನಿರ್ದೇಶಕರ ಪದನಾಮದಲ್ಲಿ ತೆರೆಯಲಾಗಿರುವ Proxy Pool ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಾರೆ. ತದನಂತರ NPS ಘಟಕದಿಂದ ಪ್ರಸ್ತುತ ನಾನ್ ಎನ್‌ಪಿಎಸ್ ನೌಕರರ ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡಲಾಗುತ್ತಿದೆ ಎಂದು ವರದಿ ಮಾಡಲಾಗಿದೆ.

| ಕ್ರ. ಸಂ | ವಿಷಯ | ಜಮೆ ಲೆಕ್ಕಶೀರ್ಷಿಕೆ | ಲೆಕ್ಕಶೀರ್ಷಿಕೆಯ ವಿವರ |
|---|---|---|---|
| 1 | ಸರ್ಕಾರದ ವಂತಿಗೆ | 2071-01-911-0-02 | Recovery of over payment on pension |
| 2 | ಸರ್ಕಾರದ ವಂತಿಗೆಯ ಮೇಲಿನ ಆದಾಯ | 0049-04-800-0-01 | Interest on Government contribution-non-NPS |

ಸೇವೆಯಿಂದ ವಜಾಗೊಂಡಿರುವ ನೌಕರರ ಸರ್ಕಾರದ ವಂತಿಗೆ ಹಾಗೂ ಅದರ ಮೇಲಿನ ಆದಾಯವನ್ನು ಸಹ, ಸದರಿ ಲೆಕ್ಕಶೀರ್ಷಿಕೆಗಳಿಗೆ ಜಮೆ ಮಾಡುವ ಬಗ್ಗೆ ನಿರ್ದೇಶಕರು ಸರ್ಕಾರದ ಮಾರ್ಗದರ್ಶನ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸರ್ಕಾರದ ನಿರ್ಧರಣೆಯು ಸುತ್ತೋಲೆಯ ರೂಪದಲ್ಲಿರುವುದನ್ನು ಮಾರ್ಪಡಿಸಿ, ಆದೇಶದಲ್ಲಿರಬೇಕೆಂಬ ಉದ್ದೇಶದಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ[ವಿ] 94 ಪಿಇಎನ್ 2016 ದಿನಾಂಕ:22-6-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸುತ್ತೋಲೆ ಸಂಖ್ಯೆ: ಆಇ[ವಿ] 94 ಪಿಇಎನ್ 2016 ದಿನಾಂಕ:27-5-2019ನ್ನು ಮಾರ್ಪಡಿಸಿ, ನೂತನ ಪಿಂಚಣಿ ಯೋಜನೆಯಡಿಯ ನೌಕರರು ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ ಪ್ರಾನ್[PRAN] ಖಾತೆಯಲ್ಲಿರುವ ನೌಕರರ ವಂತಿಗೆ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಮಾತ್ರ ನೌಕರರಿಗೆ ಅಥವಾ ವಜಾಗೊಂಡ ನೌಕರರು ಮೃತಪಟ್ಟಿದ್ದಲ್ಲಿ ಅವರ ನಾಮನಿರ್ದೇಶಿತರಿಗೆ/ಕುಟುಂಬದವರಿಗೆ ಇತ್ಯರ್ಥಪಡಿಸ ತಕ್ಕದ್ದು ಹಾಗೂ ಪ್ರಾನ್[PRAN] ಖಾತೆಯಲ್ಲಿರುವ ಸರ್ಕಾರದ ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡತಕ್ಕದ್ದೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕುಮಟಾ ಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ[ವಿಶ್ರಾಂತಿ ವೇತನ ಮತ್ತು
ಆರ್ಥಿಕ ಆಯೋಗ ಕೋಶ]

ಇವರಿಗೆ:

1. ಸರ್ಕಾರದ ಮುಖ್ಯಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ/ಆಡಿಟ್-1), ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಎಲ್ಲಾ ಡಿ.ಡಿ.ಓ.ಗಳು
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
6. ಎಲ್ಲಾ ಮಂಡಳಿಗಳು/ಮಹಾನಗರಪಾಲಿಕೆಗಳು/ಸೊಸೈಟಿಗಳು/ವಿಶ್ವವಿದ್ಯಾನಿಲಯಗಳು/ ಅನುದಾನಿತ ಶಿಕ್ಷಣ ಸಂಸ್ಥೆಗಳು/ಸ್ವಾಯತ್ತ ಸಂಸ್ಥೆಗಳು
7. ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
8. ರಿಜಿಸ್ಟ್ರಾರ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು
9. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
10. ಕಾರ್ಯದರ್ಶಿ,ಕರ್ನಾಟಕ ವಿಧಾನಸಭೆ/ಕರ್ನಾಟಕ ವಿಧಾನಪರಿಷತ್ತು, ಬೆಂಗಳೂರು
11. ಕಾರ್ಯದರ್ಶಿ, ಇ-ಆಡಳಿತ, ಹೆಚ್ಆರ್.ಎಂ.ಎಸ್, ಬಹುಮಹಡಿ ಕಟ್ಟಡ
12. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
13. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
14. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಮತ್ತು ಎಲ್ಲಾ ಜಿಲ್ಲಾ ಖಜಾನೆಗಳು
15. ಉಪನಿರ್ದೇಶಕರು, ನೂತನ ಪಿಂಚಣಿ ಘಟಕ, ವಿ.ವಿ.ಗೋಪುರ, ಬೆಂಗಳೂರು.
16. ನಿರ್ದೇಶಕರು, ಯೋಜನಾ ಇಲಾಖೆ[ನಗರ & ಗ್ರಾಮಾಂತರ], ಬಹುಮಹಡಿಗಳ ಕಟ್ಟಡ
17. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು
18. ಕಾರ್ಯದರ್ಶಿ, ವಿತ್ತೀಯ ಸುಧಾರಣೆ, ಆರ್ಥಿಕ ಇಲಾಖೆ, ಬಹುಮಹಡಿಕಟ್ಟಡ
19. ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.